ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.1284/2022

| | | | |
|---|---|---|---|
| ಹೆಸರು | : | ಬಿ ನಟರಾಜು | ಸಿ .ಡಬ್ಲ್ಯೂ :7 |
| ತಂದೆ ಹೆಸರು | : | ಹೆಚ್ ಕೆ ಬೆಟ್ಟಯ್ಯ | ಪಿ .ಡಬ್ಲ್ಯೂ :6 |
| ವಯಸ್ಸು | : | 54 ವರ್ಷ | |
| ಉದ್ಯೋಗ | : | PSI , Bidadi PS , Bangalore south | |
| ವಾಸಸ್ಥಳ | : | ಕಗ್ಗಲಿಪುರ | |

ಸಾಕ್ಷಿಯನ್ನು ದಿಃ 09-12-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಸೆಪ್ಟೆಂಬರ್ 2021 ರಿಂದ ಜುಲೈ 2022 ರವರೆಗೆ ಗುಬ್ಬಿ ಠಾಣೆಯಲ್ಲಿ PSI ಆಗಿ ಕರ್ತವ್ಯ ನಿರ್ವಹಿಸಿದ್ದೇನೆ .

ದಿಃ 14-02-2022 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಮಧ್ಯಾಹ್ನ 1.00 ಗಂಟೆಯಲ್ಲಿ ಪಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು ಠಾಣಾ ಮೊ. ಸಂಖ್ಯೆ 23/2022 ರಲ್ಲಿ ಪ್ರಕರಣ ದಾಖಲಿಸಿ ಪ್ರ ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ .

ದಿಃ 15-02-2022 ರಂದು ಮಧ್ಯಾಹ್ನ 2.40 ರಿಂದ 3.30 ರವರೆಗೆ ಚಾಸಾ -1 ರವರು ತೋರಿಸಿದ ಸ್ಥಳದಲ್ಲಿ ಚಾಸಾ -3 ಮತ್ತು 4 ರವರ ಸಮಕ್ಷಮ ನಿಪಿ -2 ರಂತೆ ಪಂಚನಾಮೆ ಕ್ರಮ ಜರುಗಿಸಿದ್ದೇನೆ .

ನಿಪಿ -1 ಮತ್ತು 2 ರಲ್ಲಿ ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -1 (ಬಿ ) ಮತ್ತು 2 (ಡಿ) ಎಂದು ಗುರುತಿಸಲಾಯಿತು.

ನಿಪಿ -2 ರಡಿಯಲ್ಲಿ ಅಪಘಾತ ಪಡಿಸಿದ KA-06-EN-4804 ಹಿರೋ ಹೋಂಡ ಮೋಟರ್ ಸೈಕಲ್ ನ್ನು ವಶಕ್ಕೆ ಪಡೆದು ಠಾಣಾ ಪಿ ಎಫ್ ನಂ . 23/2022 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೇನೆ . ದಿಃ 16-02-2022 ರಂದು ತುಮಕೂರಿನ ಹೇಮಾವತಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಗಾಯಾಳು ಪ್ರಕಾಶ್ ರವರ ಗಾಯದ ಪ್ರಮಾಣ ಪತ್ರ ನೀಡುವಂತೆ ಕೋರಿ ಮನವಿ ಸಲ್ಲಿಸಿದ್ದೇನೆ .

ದಿಃ 21-02-2022 ಅಪಘಾತಪಡಿಸಿದ ವಾಹನಗಳನ್ನು ಐಎಂವಿ ತಪಾಸಣೆಗೆ ಒಳಪಡಿಸಲು ಆರ್ ಟಿ ಓ ನವರಿಗೆ ಮನವಿ ಸಲ್ಲಿಸಿರುತ್ತೇನೆ .

ದಿಃ 28-02-2022 ರಂದು ಹೇಮಾವತಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ಗಾಯಳು ಪ್ರಕಾಶ್

ರವರ ಗಾಯದ ಪ್ರಮಾಣ ಪತ್ರ ನೀಡಿದ್ದು ಅದನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ . ದಿಃ 08-03-2022 ರಂದು ದ್ವಿ ಚಕ್ರ ವಾಹನದ ಮಾಲೀಕರಾದ ಸಿದ್ದಯ್ಯ ರವರಿಗೆ ನೋಟಿಸ್ ನೀಡಿದ್ದು ಅವರು ಠಾಣೆಗೆ ಹಾಜರಾದ ಮೇರೆಗೆ ಅವರು ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದೇನೆ . ಅವರು ತಮ್ಮ ವಾಹನಕ್ಕೆ ವಿಮೆ ಇರಲಿಲ್ಲ ಎಂದು ತಿಳಿಸಿದರು .

ದಿಃ 12-03-2023 ರಂದು ಅಪಘಾತಕ್ಕೆ ಒಳಗಾದ ವಾಹನಗಳ ಪರೀಕ್ಷಾ ವರದಿಯನ್ನು ತುಮಕೂರಿನ ಆರ್ ಟಿ ಓ ರವರಿಂದ ಸ್ವೀಕರಿಸಿರುತ್ತೇನೆ .

ದಿಃ 14-03-2023 ರಂದು ತುಮಕೂರಿನ ಹೇಮಾವತಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಗಾಯಳು ಆರೋಪಿತರ ಗಾಯದ ಪ್ರಮಾಣ ಪತ್ರ ನೀಡುವಂತೆ ಕೋರಿ ಮನವಿ ಸಲ್ಲಿಸಿದ್ದೇನೆ . ಅದೇ ದಿನ ಅವರು ಗಾಯದ ಪ್ರಮಾಣ ಪತ್ರ ನೀಡಿದ್ದು ಅದನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ . ಪ್ರಕರಣದಲ್ಲಿ ತನಿಖೆ ಮುಕ್ತಾಯಗೊಂಡಿದ್ದ ಕಾರಣ ಆರೋಪಿತರ ವಿರುದ್ಧ IPC ಕಲಂ 279, 337 ಮತ್ತು 338 ಹಾಗೂ ಐ ಎಂ ವಿ ಕಾಯ್ದೆ 196 ರಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ .

ಆರೋಪಿತನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿದ್ದಾರೆ .

ಸಾಕ್ಷಿಯು ಕಲಂ 133 ರಡಿಯಲ್ಲಿನ ನೋಟಿಸ್ , ಪ್ರತ್ಯುತ್ತರ , ವೈದ್ಯಾಧಿಕಾರಿಗಳು ನೀಡಿದ್ದ ಸಿದ್ದಯ್ಯ ರವರ ಗಾಯದ ಪ್ರಮಾಣ ಪತ್ರ, ಐ ಎಂ ವಿ ವರದಿ ಮತ್ತು ಅವುಗಳಲ್ಲಿ ತಮ್ಮ ಸಹಿಗಳನ್ನು ಗುರುತಿಸಿದ್ದಾರೆ . ಅವುಗಳನ್ನು ನಿಪಿ-4 ರಿಂದ 7 ಮತ್ತು ನಿಪಿ -4 (ಎ) ರಿಂದ 7 (ಎ) ಎಂದು ಗುರುತಿಸಲಾಯಿತು .

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದಃ</u>-

ಚಾಸಾ -2 ರವರು ಉಡುಪಿ ಹೋಟೆಲ್ ನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ತೋರಿಸಲು ಯಾವುದೇ ದಾಖಲೆ ಪಡೆದಿಲ್ಲ . CVR Liquor shop ಮತ್ತು ಲಕ್ಷ್ಮೀ ವೆಂಕಟೇಶ್ವರ ಎಂಟರ್ ಪ್ರೈಸಸ್ ನಡುವೆ 5-6 ಅಂಗಡಿಗಳು ಬರುತ್ತವೆ ಎಂದರೆ ಇನ್ನೂ ಹೆಚ್ಚು ಇರುತ್ತವೆ ಎಂದು ಸಾಕ್ಷಿ ಹೇಳಿದ್ದಾರೆ . CVR Liquor shop ಮತ್ತು ಲಕ್ಷ್ಮೀ ವೆಂಕಟೇಶ್ವರ ಎಂಟರ್ ಪ್ರೈಸಸ್ ನಡುವೆ ಸುಮಾರು 50 ಮೀಟರ್ ಅಂತರವಿದೆ . ಸದರಿ ಶಾಫ್ ಗಳ ನಡುವೆ 200 ಅಡಿಗಳ ಅಂತರವಿದೆ ಎಂದರೆ ಸರಿಯಲ್ಲ. CVR Liquor shop ಎದುರು ಭಾಗದ ರಸ್ತೆಯಲ್ಲಿ ಅಪಘಾತ ನಡೆದಿದೆ ಎಂದು ದೂರಿನಲ್ಲಿ ತಿಳಿಸಿದ್ದರೂ ಸಹಾ ನಾನು ಲಕ್ಷ್ಮೀ ವೆಂಕಟೇಶ್ವರ ಎಂಟರ್ ಪ್ರೈಸಸ್ ನ ಮುಂಭಾಗದಲ್ಲಿ ಮಹಜರು

ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ -2 ರವರಿಗೆ ಅನುಕೂಲವಾಗಲೆಂದು ಅಗತ್ಯಕ್ಕೆ ತಕ್ಕಂತೆ ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡಿಲ್ಲ , ಚಾಸಾ -1 ಮತ್ತು 2 ರವರ ಮಾತು ಕೇಳಿ ದಾಖಲೆಗಳನ್ನು ಸೃಷ್ಟಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಸ್ಥಳದಲ್ಲಿ ಕಚ್ಚಾ ನಕ್ಷೆ ತಯಾರಿಸಿಲ್ಲ . ಸ್ಥಳದಲ್ಲಿ ಅಮಾನತ್ತು ಪಂಚನಾಮೆ ತಯಾರಿಸಿದ್ದೇನೆ . ನಾನು ಸ್ಥಳದಲ್ಲಿ ಅಮಾತನ್ತು ಪಂಚನಾಮೆ ತಯಾರಿಸಿಲ್ಲ ಆದರೂ ಸಹಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
**(ಅನುಪಮ.ಡಿ )**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.